ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

3ನೇ ವರ್ಷ 45ನೇ ಸಂಚಿಕೆ ಕೊಪ್ಪ 11-8-1985 ಭಾನುವಾರ ಬೆಲೆ 40 ಪೈಸೆ

ಅತಿ ಕಡಿಮೆ ವೆಚ್ಚದ 'ಕಾಮಧೇನು' ಸಗಣಿ ಅನಿಲ ಘಟಕ ಯಶಸ್ವಿ ಕಾರ್ಯಾರಂಭ

ಶೇ. 25 ಸಬ್ಸಿಡಿ, ಸಿಮೆಂಟ್ ಪೂರೈಕೆ ಭರವಸೆ

ಶಾನುವಳ್ಳಿ: 'ಕಾಮಧೇನು' ಸಗಣಿ ಅನಿಲ ಘಟಕ ಕಟ್ಟಿಸುವವರಿಗೆ ಅಗತ್ಯವಿದ್ದಷ್ಟು ಸಿಮೆಂಟನ್ನು ಟಿ.ಎ.ಪಿ.ಸಿ.ಎಂ.ಎಸ್. ಗಳ ಮೂಲಕ ಪೂರೈಸುವುದಲ್ಲದೆ, ಪ್ರಾಯೋಗಿಕವಾಗಿ ಇಡೀ ಜಿಲ್ಲೆಯಲ್ಲಿ ಒಟ್ಟು 100 ಘಟಕಗಳಿಗೆ ಶೇ. 25ರಷ್ಟು ಸಹಾಯಧನವನ್ನೂ ಸಹ ನೀಡುವುದಾಗಿ ಜಿಲ್ಲಾಧಿಕಾರಿಗಳು ಇಲ್ಲಿ ಘೋಷಿಸಿದರು.

ನಿರಂತರ ಕರತಾಡನದ ಮಧ್ಯೆ ತಮ್ಮ ಈ ದಿಟ್ಟ ನಿರ್ಧಾರಗಳನ್ನು ಪ್ರಕಟಿಸಿದ ಅವರು, ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ (ಡಿ.ಆರ್.ಡಿ.ಎಸ್.) ಅಧ್ಯಕ್ಷರಾಗಿ, ಸರ್ಕಾರದ ಅನುಮತಿ ನಿರೀಕ್ಷಿಸಿ, ಸ್ಥಳದಲ್ಲೇ ಈ ನಿರ್ಧಾರ ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿದರು. ಸದ್ಯಕ್ಕೆ ಈ ಸಹಾಯ ಧನವನ್ನು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮಾತ್ರ ನೀಡುವುದಾಗಿ ತಿಳಿಸಿದ ಅವರು, ಪರಿಶಿಷ್ಟ ಜಾತಿ/ವರ್ಗಗಳವರು ಇದನ್ನು ಕಟ್ಟಿಸುವುದಾದಲ್ಲಿ ಶೇ. 18 ರ ನಿಧಿಯ ಹಣವನ್ನೂ ಸೇರಿಸಿ, ಪೂರ್ತಿ ಖರ್ಚನ್ನೂ ಡಿ. ಆರ್. ಡಿ. ಎಸ್. ವಹಿಸಿಕೊಳ್ಳುವುದಾಗಿಯೂ ಸಹ ಘೋಷಿಸಿದರು.

ಆ. 10 ರಂದು ಇಲ್ಲಿನ ನಿವಾಸಿ ಹೆಚ್. ಆರ್. ಶೀನಪ್ಪ ನಾಯ್ಕರ ಮನೆಯಲ್ಲಿ ಕಟ್ಟಿಸಿರುವ ಜಿಲ್ಲೆಯಲ್ಲೇ ಮೊಟ್ಟ ಮೊದಲನೆಯದಾದ ಇಂಥ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದ ಅವರು, 'ಅಪರಿಚಿತ'ವಾದ ಈ ಘಟಕ ಕಟ್ಟಿಸುವ 'ಸಾಹಸ' ಮಾಡಿದ ಶೀನಪ್ಪ ನಾಯ್ಕರನ್ನು ಡಿಆರ್‌ಡಿಎಸ್ ಮೂಲಕ ಸನ್ಮಾನಿಸುವುದಾಗಿಯೂ ಪ್ರಕಟಿಸಿದರು.

ಇದಕ್ಕೆ ಮೊದಲು ಸ್ಟೌ ಉರಿಸುವ ಮೂಲಕ ಈ ಘಟಕವನ್ನು ವಿಶೇಷ ಜಿಲ್ಲಾಧಿಕಾರಿ ಕು|| ರತ್ನಪ್ರಭ ಉದ್ಘಾಟಿಸಿದರು. ಜಿಲ್ಲಾ ಮಂತ್ರಿ ಗೋವಿಂದ ಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. 'ಕಾಮಧೇನು' ಮಾದರಿಯನ್ನು ವಿನ್ಯಾಸಗೊಳಿಸಿದ ಮುಡಸೂರು ರಾಮಚಂದ್ರ ಮತ್ತು ಹಾಲಿ ಈ ಘಟಕಕ್ಕೆ ಹಣಕಾಸು ಒದಗಿಸಿದ ಚಿಕ್ಕಮಗಳೂರು-ಕೊಡಗು ಬ್ಯಾಂಕಿನ ಅಧ್ಯಕ್ಷ ಕೆ. ಅಚ್ಯುತ ಪೈ ಮುಖ್ಯ ಅತಿಥಿಗಳಾಗಿದ್ದರು.

ಜಿಲ್ಲಾಧಿಕಾರಿಗಳ ನಿರ್ಧಾರವನ್ನು ದೃಢವಾಗಿ ಬೆಂಬಲಿಸಿದ ಗೋವಿಂದ ಗೌಡರು, ಇದಕ್ಕೆ ರಾಜ್ಯ ಸರ್ಕಾರದ ಅನುಮತಿ ದೊರಕಿಸಲು ಎಲ್ಲ ಯತ್ನ ನಡೆಸುವುದಲ್ಲದೆ, ಕ್ರಮಬದ್ಧವಾದ ಸಹಾಯ ಧನವನ್ನು ಕೇಂದ್ರದಿಂದ ದೊರಕಿಸಲು ಸಹ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದಾಗಿ ಭರವಸೆ ಕೊಟ್ಟರು.

ಮುಂದುವರಿದು ಅವರು, ಈಗ ಚಾಲ್ತಿಯಲ್ಲಿರುವ ಮಾದರಿಗಳ ಮೂರರಲ್ಲೊಂದು ಭಾಗದಷ್ಟು ಕಡಿಮೆ ಖರ್ಚಿನಲ್ಲಿ ನಿರ್ಮಿಸಬಹುದಾದ ಈ ಘಟಕದಿಂದಾಗಿ ಹಳ್ಳಿಯ ಕುಶಲ ಕಸುಬಾದ ಕುಂಬಾರಿಕೆಗೆ ಉತ್ತೇಜನ ದೊರೆಯುವುದಲ್ಲದೆ ಸಿಮೆಂಟ್ ಬಳಕೆ ಸಹ ಅತಿ ಕಡಿಮೆಯಾಗುತ್ತದೆ. ಇಂಥ ಒಂದು ಉತ್ತಮ ಮಾದರಿಯನ್ನು ವಿನ್ಯಾಸಗೊಳಿಸಿದ ಮುಡಸೂರು ರಾಮಚಂದ್ರ ಅವರೂ, ಅದನ್ನು ನಮ್ಮ ಜಿಲ್ಲೆಯಲ್ಲೇ ಮೊದಲಿಗೆ ನಮ್ಮ ಕ್ಷೇತ್ರದಲ್ಲಿ ಪರಿಚಯಿಸಲು ಅವಿರತವಾಗಿ ಶ್ರಮಿಸಿದ ಕೃಷಿ ಸಹಾಯಕ ಕ. ಸು. ರಾಮಚಂದ್ರ ಅವರೂ, ಮೊದಲ ಘಟಕ ನಿರ್ಮಿಸುವ ಧೈರ್ಯ ಮಾಡಿದ ಶೀನಪ್ಪ ನಾಯ್ಕರೂ ಅಭಿನಂದನಾರ್ಹರು ಈ ಮಾದರಿಯನ್ನು ನಮ್ಮ ಹಳ್ಳಿಗಳ ಸಣ್ಣ ರೈತರುಗಳು ಹೆಚ್ಚು ಹೆಚ್ಚಾಗಿ ಕಟ್ಟಿಸಿಕೊಂಡು ಪ್ರಯೋಜನ ಪಡೆಯಬೇಕು ಎಂದರು.

ಅಚ್ಚುತ ಪೈ ಅವರು ಮಾತನಾಡುತ್ತ, ಬೇರೆ ಮಾದರಿಯ ಘಟಕಕ್ಕೆ 14 ಸಾವಿರ ರೂ. ಸಾಲ ಮಾಡಿ ಅದರಲ್ಲಿ ಕಾಲಾಂಶ ಸಬ್ಸಿಡಿ ಪಡೆಯುವುದಕ್ಕಿಂತಲೂ ಕೇವಲ 6 ಸಾವಿರ ರೂ.ಗಳಲ್ಲಿ ಘಟಕ ಕಟ್ಟಿಸಿ 8 ಸಾವಿರ ರೂ. ಸಬ್ಸಿಡಿ ದೊರೆಯಿತೆಂದು ತಿಳಿಯಿರೆಂದು ಮಾರ್ಮಿಕವಾಗಿ ತಿಳಿಸಿದರು. ದ ಕನ್ನಡ ಜಿಲ್ಲೆಯ ಉಜಿರೆಯಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಸ್ವ-ಉದ್ಯೋಗ ತರಬೇತಿ ಕೇಂದ್ರದಲ್ಲಿ ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ನಿರುದ್ಯೋಗಿಗಳಿಗೂ (ವಿದ್ಯಾವಂತ/ಅವಿದ್ಯಾವಂತ) ಅವಕಾಶ ಕೊಡುವುದಾಗಿಯೂ. ಆಸಕ್ತಿಯಾದ ವಿದ್ಯಾರ್ಥಿಗಳಿಗೆ ಖರ್ಚು ಕೊಟ್ಟು ಕೇಂದ್ರಕ್ಕೆ ಕರೆಸಿಕೊಳ್ಳುವುದಾಗಿಯೂ ವೀರೇಂದ್ರ ಹೆಗ್ಗಡೆಯವರು ಆಶ್ವಾಸನೆ ಕೊಟ್ಟಿದ್ದು, ಆಸಕ್ತರು ಗ್ರಾಮೀಣ ಬ್ಯಾಂಕಿನ ಯಾವುದೇ ಶಾಖೆಯನ್ನು ಸಂಪರ್ಕಿಸಿ, ಮಾಹಿತಿ ಪಡೆಯಬಹುದೆಂದು ಅವರು ಹೇಳಿದರು.

ಸನ್ಮಾನಿತರಾದ ಮುಡಸೂರು ರಾಮಚಂದ್ರ ಅವರನ್ನು ಸಭೆಗೆ ಪರಿಚಯಿಸಿದ ಸಿರಿಮನೆ ನಾಗರಾಜ್, ಅತ್ಯಂತ ಕ್ರಾಂತಿಕಾರಿ ಎನ್ನಬಹುದಾದಂಥ ವಿನ್ಯಾಸವೊಂದನ್ನು ರೂಪಿಸಿರುವ ಹಳ್ಳಿಗಾಡಿನ ಒಬ್ಬ ಅತಿ ಸಣ್ಣ ರೈತ ಯುವಕನನ್ನು ಇನ್ನೊಬ್ಬ ರೈತ ಇಲ್ಲಿ ಸನ್ಮಾನಿಸುತ್ತಿರುವ ಸಂದರ್ಭ ವಿಶಿಷ್ಟವಾದುದು ಎಂದರು. ಶೀನಪ್ಪನಾಯ್ಕರ ಪರವಾಗಿ ರಾಮಚಂದ್ರ ಅವರನ್ನು ಗೋವಿಂದ ಗೌಡರು ಕಿರು ಕಾಣಿಕೆ ನೀಡಿ ಸನ್ಮಾನಿಸಿದರು. ಅನಂತರ ಕೃಷಿ ಸಹಾಯಕ ಕ.ಸು. ರಾಮಚಂದ್ರ ಅವರನ್ನೂ ಸಹ ಅವರ ನಿಷ್ಠಾವಂತ ಜನಸೇವೆಗಾಗಿ ಶೀನಪ್ಪನಾಯ್ಕ ಮತ್ತು ಹೆಚ್.ಎಂ. ಕೃಷ್ಣಮೂರ್ತಿ ಕಿರು ಕಾಣಿಕೆ ನೀಡಿ ಗೌರವಿಸಿದರು.

ಇದೇ ಸಂದರ್ಭದಲ್ಲಿ ಕೊಪ್ಪ ತಾ. ಅ. ಮಂಡಳಿಯಿಂದ 4 ಜನರಿಗೆ ಹೆರಿಗೆ ಭತ್ಯೆವನ್ನೂ ಗ್ರಾಮೀಣ ಬ್ಯಾಂಕಿನಿಂದ 19ಜನರಿಗೆ 'ನೇಗಿಲುಭಾಗ್ಯ' ಮಂಜೂರಾತಿ ಪತ್ರವನ್ನೂ ವಿತರಿಸಲಾಯಿತು.

ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ನರಸಿಂಹರಾವ್ ಸ್ವಾಗತಿಸಿ, ಕ್ಷೇತ್ರಪಾಲ ವಂದಿಸಿದರು.

500 ಕ್ಕೂ ಮಿಕ್ಕು ನೆರೆದಿದ್ದ ಸಭಿಕರಲ್ಲಿ ಸುತ್ತಮುತ್ತಲ ಊರವರಲ್ಲದೆ, ಶೃಂಗೇರಿ, ನ.ರಾ. ಪುರ ತಾ|| ಗಳಿಂದಲೂ ಸಹ ಬಂದವರಿದ್ದರು. ಘಟಕವನ್ನು ಸಂದರ್ಶಿಸಿದ ಎಲ್ಲರಿಗೂ ಇಬ್ಬರು ರಾಮಚಂದ್ರರೂ ಮಾಹಿತಿಗಳನ್ನು ನೀಡಿದರು.

ಕಾರ್ಯಕ್ರಮಕ್ಕೆ ಮೊದಲು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಘಟಕದ ವಿವರ ನೀಡಿದ ರಾಮಚಂದ್ರ ಅವರು, ಘಟಕಗಳನ್ನು ಸರಿಯಾದ ಮಾಹಿತಿಯಿಲ್ಲದೆ ಕಟ್ಟಬಾರದೆಂದು ಎಚ್ಚರಿಸಿದರು. ಸುಮಾರು 4 ಅಥವಾ 5 ಜಾನುವಾರುಗಳಿದ್ದರೆ ಒಂದು ಘಟಕ ಕಟ್ಟಬಹುದೆಂದ ಅವರು ಸಾಗರ ಮತ್ತು ಸೊರಬ ತಾ|| ಗಳಲ್ಲಿ ಈವರೆಗೆ ಸುಮಾರು 35 ಘಟಕಗಳನ್ನು ತಾವು ಕಟ್ಟಿಸಿರುವುದಾಗಿಯೂ ಮೂರೂ ಮುಕ್ಕಾಲು ವರ್ಷಗಳಿಂದಲೂ ಅವು ಸಮರ್ಪಕವಾಗಿ ಕೆಲಸ ಮಾಡುತ್ತಿವೆ ಎಂದೂ ತಿಳಿಸಿದರು.

ತಿದ್ದುಪಡಿ

ನಮ್ಮ ಕಳೆದ ಸಂಚಿಕೆಯಲ್ಲಿ ಆಗುಂಬೆ-ಮೈಸೂರು ಸರ್ಕಾರಿ ಬಸ್ಸಿನ ವೇಳೆ ತಪ್ಪಾಗಿದೆ. ಬಸ್ಸು ಸಂಜೆ 7 ಗಂಟೆಗೆ (ಬೆ. ಅಲ್ಲ) ಆಗುಂಬೆ ಬಿಟ್ಟು ಬೆಳಗಿನಜಾವ 4 ಗಂಟೆಗೆ ಮೈಸೂರನ್ನೂ, ಅಲ್ಲಿಂದ ರಾತ್ರಿ 8.30 ಕ್ಕೆ ಬಿಟ್ಟು ಬೆಳಗಿನ ಜಾವ 4.30 ಕ್ಕೆ ಆಗುಂಬೆಯನ್ನೂ ತಲುಪುತ್ತದೆ.

ಬಸರೀಕಟ್ಟೆ ಗ್ರಾಮ ಸಂದರ್ಶನ ಕಾರ್ಯಕ್ರಮ

(ವರದಿ: ಜ್ಯೋ. ಕೃ. ಶಿವಶಂಕರ್)

ಬಸರಿಕಟ್ಟೆ: ಇಲ್ಲಿ ಜು. 19 ರಂದು ನಡೆದ ಜಿಲ್ಲಾಧಿಕಾರಿಗಳ ಗ್ರಾಮ ಸಂದರ್ಶನ ಸಭೆಯಲ್ಲಿ ಚರ್ಚಿತವಾದ ಮುಖ್ಯಾಂಶಗಳು ಇಲ್ಲಿವೆ.

ಸಾರ್ವಜನಿಕರಿಂದ 25 ಅಹವಾಲುಗಳಿದ್ದವು. ಹೆಚ್ಚಿನವು ರೆವಿನ್ಯೂ ಮತ್ತು ಸರ್ವೆ ಇಲಾಖೆಗೆ ಸಂಬಂಧಪಟ್ಟಿದ್ದವು. ಲೋಕೋಪಯೋಗಿ ಇಲಾಖೆಯ ವತಿಯಿಂದ ನೀಡಿದ ಉತ್ತರದಲ್ಲಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಮುಂದಿನ ಬಜೆಟ್‌ನಲ್ಲಿ ಸೇರಿಸುವ ಭರವಸೆ. ಬಸರೀಕಟ್ಟೆ ಆಸ್ಪತ್ರೆಗೆ ವೈದ್ಯರ ನೇಮಕ ಆಗುವವರೆಗೆ ಜಯಪುರದ ವೈದ್ಯಾಧಿಕಾರಿಗಳು ವಾರಕ್ಕೊಮ್ಮೆ ಭೇಟಿ ನೀಡುವಂತೆ ಮಾಡಲು ಡಾ|| ಜಗದೀಶ್ ಭರವಸೆ.

ಶಿವಮೊಗ್ಗ ಮತ್ತು ಚಿಕ್ಕಮಗಳೂರಿಗೆ ಬಸರಿಕಟ್ಟೆಯಿಂದ ನೇರ ಬಸ್ ಸೌಲಭ್ಯ ಕಲ್ಪಿಸುವ ಬಗ್ಗೆ ಸಂಬಂಧಪಟ್ಟ ಡಿಪೋ ಮ್ಯಾನೇಜರ್‌ಗಳನ್ನು ಸಂಪರ್ಕಿಸುವುದಾಗಿ; ಬಸರೀಕಟ್ಟೆಯಲ್ಲಿ ಈಗ ತಂಗುತ್ತಿರುವ ಬಸ್‌ಗಳ ಪೈಕಿ ಒಂದನ್ನು ರಾತ್ರಿ ಕವನಹಳ್ಳದಲ್ಲಿ ತಂಗುವಂತೆ ಆದೇಶ ನೀಡುವುದಾಗಿ; ಬಸರೀಕಟ್ಟೆಗೆ ಪೋಲೀಸ್ ಔಟ್ ಪೋಸ್ಟ್ ಬೇಡಿಕೆ ಬಗ್ಗೆ ಎಸ್ಪಿಯವರನ್ನು ಸಂಪರ್ಕಿಸುವುದಾಗಿ— ಜಿಲ್ಲಾಧಿಕಾರಿಗಳ ಭರವಸೆ.

ದರಖಾಸ್ತು ಸಾಗುವಳಿ ಚೀಟಿ ನೀಡಿಕೆ ವಿಳಂಬಕ್ಕೆ ಅರಣ್ಯ ಇಲಾಖೆಯಿಂದಾಗುತ್ತಿರುವ ತೊಡಕು ಕಾರಣವಾಗಿದ್ದು, ಕೂಡಲೇ ಆ ಬಗ್ಗೆ ಗಮನಹರಿಸಬೇಕೆಂದು ಹಾಜರಿದ್ದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಸೂಚನೆ (ಆದರೆ ಆ ಇಲಾಖೆಯಿಂದ ಹಿರಿಯ ಅಧಿಕಾರಿಗಳ್ಯಾರೂ ಇರಲಿಲ್ಲ.)

ಬಸರೀಕಟ್ಟೆಯಲ್ಲಿ ಕಡಿಮೆ ವೋಲ್ಟೇಜ್‌ನಲ್ಲಿ ವಿದ್ಯುತ್ ಸರಬರಾಜಾಗುತ್ತಿದ್ದು, ಹೆಚ್ಚಿನ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಅಳವಡಿಸಬೇಕೆಂಬ ಬೇಡಿಕೆಗೆ ಉತ್ತರವಾಗಿ, ಈಗಿನ ಟ್ರಾನ್ಸ್‌ಫಾರ್ಮರ್ ಹೆಚ್ಚಿನ ಸಾಮರ್ಥ್ಯದ್ದೇ ಇದ್ದು, ತೊಡಕು ಏನೆಂದು 3-4 ದಿನದೊಳಗೆ ಸಿಬ್ಬಂದಿ ಕಳಿಸಿ ಸರಿಪಡಿಸುವುದಾಗಿಯೂ; ಭಾಗ್ಯಜ್ಯೋತಿ ಸಂಬಂಧಪಟ್ಟ ಇಲಾಖೆಯಿಂದ ಮಂಜೂರಾಗಿ ಬಂದಲ್ಲಿ ಕಲ್ಪಿಸಿಕೊಡುವುದಾಗಿಯೂ ಕ. ವಿ. ಮಂ. ಅಧಿಕಾರಿಗಳ ಭರವಸೆ.

ಬಡವರಿಗೆ ನೀಡಿರುವ ದರಖಾಸ್ತು ಜಮೀನುಗಳು ಅಳತೆಯಾಗಿ ಹಂಚಿಕೆಯಾಗದೆ ಇರುವುದರಿಂದ ಬೇರೆಯವರು ಒತ್ತುವರಿ ಮಾಡುತ್ತಿರುವ ಪ್ರಕರಣಗಳು ತಮ್ಮ ಗಮನಕ್ಕೆ ಬಂದಿದ್ದು, ಈ ಬಗ್ಗೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ಕೈಗೊಳ್ಳುವುದಾಗಿ ತಹಸೀಲ್ದಾರ್ ಕರೀಗೌಡರಿಂದ ಎಚ್ಚರಿಕೆ.

ಬಸರೀಕಟ್ಟೆಗೆ ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪದ ವ್ಯವಸ್ಥೆಯ ವಿಸ್ತರಣೆ, ಸಮೀಪದ ಊರುಗಳಲ್ಲಿ ಬಸ್ ಸ್ಟಾಪ್‌ಗಳ ಬೇಡಿಕೆ ಮುಂತಾದ ವಿಷಯಗಳು ಪ್ರಸ್ತಾಪಕ್ಕೆ ಬಂದು ಆ ಬಗ್ಗೆ ಸಂಬಂಧಪಟ್ಟವರಿಂದ ಸಮಜಾಯಿಷಿ ಮತ್ತು ಭರವಸೆ.

ಜಿಲ್ಲಾಧಿಕಾರಿಯವರ ಈ ಗ್ರಾಮ ಸಂದರ್ಶನ ಸಭೆಯ ಕಾರ್ಯಕ್ರಮ ಸುತ್ತಮುತ್ತಲ ಹಳ್ಳಿಗಳಿಗೆ ಪ್ರಚಾರವಿಲ್ಲದಿದ್ದುದರಿಂದ (ಸ್ಥಳೀಯ ಗುಂಪುಗುಳಿತನದಿಂದ) ಹಳ್ಳಿಗರನೇಕರಿಗೆ ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಇನ್ನೂ ಹೆಚ್ಚೆಂದರೆ ಬಸರೀಕಟ್ಟೆಯ ನಿವಾಸಿಗಳಿಗೇ ಅದೇ ದಿನ ಬೆಳಗ್ಗೆ ವಿಷಯ ಗೊತ್ತಾಯಿತೆಂದರೆ ಆಶ್ಚರ್ಯವಾಗಬಹುದೇನೋ.

ಬೀಳ್ಕೊಡಿಗೆ

ಕೊಪ್ಪ: ಇಲ್ಲಿನ ಪೋಲೀಸ್ ಠಾಣೆಯಲ್ಲಿ ಆ. 5 ರ ಸಂಜೆ ಸ|| ಇ|| ಶಶಿಕುಮಾರರಿಗೆ ಸಿಬ್ಬಂದಿಯಿಂದ ಬೀಳ್ಕೊಡಿಗೆ ಸಮಾರಂಭ ನಡೆಯಿತು.

ಸ್ವಾತಂತ್ರ್ಯ ದಿನಾಚರಣೆಯ ವಿಶೇಷ ಲೇಖನ

ಆಗಸ್ಟ್ 15: ಸ್ವಾತಂತ್ರ್ಯೋತ್ಸವವೋ? ಸ್ವಾತಂತ್ರ್ಯ ಶ್ರಾದ್ಧವೋ?

ಸ್ವಾತಂತ್ರ್ಯೋತ್ಸವ ಸ್ವಾತಂತ್ರ್ಯ ಬಂದ ದಿನದ ಸಂಕೇತ. ಆದರೆ ಶ್ರಾದ್ಧ ಎನ್ನುವುದು ಸತ್ತವರಿಗೆ ನಡೆಸುವ ಸಾಂಪ್ರದಾಯಿಕ ವಿಧಿ. ಒಂದು ಶುಭ, ಇನ್ನೊಂದು ಅಶುಭ. ಇಂಥಲ್ಲಿ ನಾನು ನಮ್ಮ ದೇಶದ ಸ್ವಾತಂತ್ರ್ಯೋತ್ಸವದ ದಿನಕ್ಕೆ 'ಶ್ರಾದ್ಧ'ವೆಂದಾಗ ಎಂಥವರೂ ಹುಬ್ಬೇರಿಸಬಹುದು. ನನ್ನನ್ನು ದೇಶದ್ರೋಹಿ ಎನ್ನಬಹುದು.

ಆದರೆ ಈ ಆಗಸ್ಟ್ 15 ಸಂಭ್ರಮದ ದಿನವಾಗಬೇಕಾದರೆ, ಸ್ವಾತಂತ್ರ್ಯ ಜನ್ಮೋತ್ಸವವನ್ನು ನಾವು ಆಚರಿಸಬೇಕಾದರೆ ಈಗ ಆ "ಸ್ವಾತಂತ್ರ್ಯ" ಬದುಕಿದೆಯೇ? ಎಂಬುದನ್ನು ಯೋಚಿಸಬೇಕಾಗುತ್ತದೆ. ಅನೇಕ ಸ್ವಾತಂತ್ರ್ಯ ಹೋರಾಟಗಾರರ ಸೆರೆಮನೆ, ನೇಣುಗಂಬ, ನೆತ್ತರಿನ ಪ್ರತಿಫಲ ಈಗೆಲ್ಲಿದೆ? ಹುತಾತ್ಮ ಶ್ರೇಷ್ಠರು ಬಿಳಿಯರ ದಾಸ್ಯ ಶೃಂಖಲೆಯಿಂದ ವಿಮುಕ್ತಗೊಳಿಸಿದ ಭಾರತ ಮಾತೆಯ ಕೋಟ್ಯಾಂತರ ಮಕ್ಕಳೀಗ ಸರ್ವ ಸ್ವತಂತ್ರರೆ? ಸ್ವತಂತ್ರ ಭಾರತದ ಕನಸು ನನಸಾಗಿದೆಯೇ? ಸಂವಿಧಾನಾತ್ಮಕವಾದ, ಮೂಲಭೂತ ಹಕ್ಕುಗಳಿಂದ ಆವೃತವಾದ, ಅಹಿಂಸೆಯೇ ಮೂಲಾಧಾರವಾದ ಸ್ವಾತಂತ್ರ್ಯ ಈಗ ಸಜೀವಿಯೆ?

ಇದು ಸಹಜವಾಗಿ ಮನಸ್ಸಿನಲ್ಲಿ ಮೂಡಿದ್ದರಿಂದ 'ಸ್ವಾತಂತ್ರ್ಯಶ್ರಾದ್ಧ'ವೆನ್ನಬೇಕಾಯ್ತು. ಗಾಂಧಿ ಕಂಡ ಸ್ವಾತಂತ್ರ್ಯ ಕೈವಶವಾದರೂ ಅನುಭವಿಸಲು ಇಲ್ಲವಲ್ಲಾ ಎಂದು ದುಃಖಿಸಬೇಕಾದ ದಿನವಿದು. ಹಾಗಾದರೆ ಸ್ವಾತಂತ್ರ್ಯ ಏನಾಯ್ತು?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ, ನಿಜ. ಆದರೆ ಬ್ರಿಟೀಷರಿಂದ ದೇಶೀಯ ಪುಢಾರಿಗಳ ಕೈಗೆ ಹಸ್ತಾಂತರಗೊಂಡಿದೆ. ಮೂಲಭೂತ ಹಕ್ಕು, ಸ್ವಾತಂತ್ರ್ಯ ಎಂಬ ಪದಗಳು ಸಂವಿಧಾನದ ಹೊತ್ತಗೆಯಲ್ಲಿ ದೊಡ್ಡಕ್ಷರದಲ್ಲಿ ರಾರಾಜಿಸುತ್ತಿವೆ. ಆದರೆ ನಿಜವಾದ ಸ್ವಾತಂತ್ರ್ಯ ಮತ್ತು ಹಕ್ಕುಗಳು ಬಾಣಲೆಯಿಂದ ಬೆಂಕಿಗೆ ಬಿದ್ದಿವೆ ಅಷ್ಟೆ.

ಸ್ವಾತಂತ್ರ್ಯೋತ್ಸವ ಅಥವಾ ಸ್ವಾತಂತ್ರ್ಯದ ಹುಟ್ಟಿದ ಹಬ್ಬ ನಮಗೆ ನಮ್ಮ ಸ್ವಾತಂತ್ರ್ಯ ಸತ್ತ ದಿನವನ್ನು ಜ್ಞಾಪಿಸಿಕೊಟ್ಟರೆ ಆ ಆಚರಣೆಗೆ 'ಶ್ರಾದ್ಧ' ಎನ್ನುವುದೇ ಸೂಕ್ತವಲ್ಲವೆ?

ಹಾಗಾದರೆ ಸ್ವತಂತ್ರ ಭಾರತದ ಅಡಿಗಲ್ಲಾದ ಮೂಲಭೂತ ಹಕ್ಕುಗಳ ಸ್ಥಿತಿಗತಿ ಈಗೇನಾಗಿದೆ?

1) ಶೋಷಣೆಯ ವಿರುದ್ಧ ಹಕ್ಕು:- ಈಗ ಜನಸಾಮಾನ್ಯರ ಶೋಷಣೆ ಆಡಳಿತ ವರ್ಗದಿಂದ ಹಿಡಿದು ಅಧಿಕಾರಿ ವರ್ಗಗಳವರೆಗೂ ಸರ್ವತೋಮುಖವಾಗಿ ನಡೆಯುತ್ತಲೇ ಇದೆ. ಇದರ ವಿರುದ್ಧ ಜನಸಾಮಾನ್ಯನೊಬ್ಬ ಧ್ವನಿ ಎತ್ತಿದಾಗ, ಈ ಸಂದರ್ಭವನ್ನು ಹಸಿದ ಹೆಬ್ಬುಲಿಯಂತೆ ಕಾಯುತ್ತಿರುವ, ನಾಯಿ ಕೊಡೆಗಳಂತೆ ಬೆಳೆಯುತ್ತಿರುವ ಯಾವುದೋ ರಾಜಕೀಯ ಪಕ್ಷಗಳು ಬಳಸಿಕೊಂಡು, ಗಲಭೆ, ಹಿಂಸೆ, ಲಾಠಿಛಾರ್ಜ್‌ಗಳಿಗೆ ಕಾರಣವಾಗಿ ಬುದ್ಧಿಜೀವಿಯ ಬಂಧನದೊಂದಿಗೆ ಪರ್ಯವಸಾನವಾಗುತ್ತದೆ.

2) ಆಸ್ತಿಯ ಹಕ್ಕು:- ಭೂಸುಧಾರಣೆಯ ಅಸಮರ್ಪಕ ನೀತಿಯಿಂದಾಗಿ ಗೇಣಿದಾರನ ಜಮೀನೆಲ್ಲ ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ಸರ್ಕಾರಿ ವಶ. ಕಂತು ತೀರಿದಾಗ ಮಾತ್ರ ಸ್ವಂತದ್ದು. ಕಟ್ಟಿದ ಹಣದಲ್ಲಿ ಮುಕ್ಕಾಲು ಪಾಲು ಬಡ್ಡಿ ಬಾಬ್ತಿಗಾದರೆ ಅಸಲು ತೀರುವುದೆಂದೋ? ಇನ್ನು ದರ್ಖಾಸ್ತು ಮೂಲಕ ಜಮೀನು ಮಾಡುವ ಅವಕಾಶ ಆಳುವ ಪಕ್ಷದ ಪ್ರಾದೇಶಿಕ ಪದಾಧಿಕಾರಿಗಳಿಗೆ ಮತ್ತು ಹಿಂಬಾಲಕರಿಗೆ ಮಾತ್ರ ಸಾಧ್ಯ.

3) ಮತದಾನದ ಹಕ್ಕು:- ಮತದಾರನಿಗೆ ಮತಿಭ್ರಮಣೆಯಾಗುವಷ್ಟು ಪಕ್ಷಗಳ, ಪಕ್ಷೇತರರ ಗೊಂದಲಮಯ ವಾತಾವರಣದಲ್ಲಿ, ಸೀರೆ, ಪಂಚೆ, ಮದ್ಯಗಳ ವಿನಿಮಯದ ಮಹಾಪೂರದಲ್ಲಿ, ಜಾತಿಯಾಧಾರಿತ ಪರಿಸರದಲ್ಲಿ, ಈ ಕಳ್ಳಹಾದಿಗಳಲ್ಲಿ ನಿಷ್ಣಾತನಾದ ಅಭ್ಯರ್ಥಿ ವಿಜಯಿಯಾಗುತ್ತಾನೆ. ವಿಚಾರವಂತ ಮತದಾರ ಮಂಕಾಗುತ್ತಾನೆ.

4) ನ್ಯಾಯ ಪಡೆಯುವ ಹಕ್ಕು:- ತನಗಾದ ಅನ್ಯಾಯದ ವಿರುದ್ಧ ನ್ಯಾಯಾಲಯಕ್ಕೆ ಹೋಗುವ ಹಕ್ಕಿದೆ. ಆದರೆ ಶಕ್ತಿ? ಅಷ್ಟು ಮಾಡಿ ಹೋದರೂ ನ್ಯಾಯದಾನದಲ್ಲಾಗುವ ದಶಕಗಟ್ಟಲೆಯ ವಿಳಂಬ ನ್ಯಾಯದಾನದ ಅರ್ಥವನ್ನೇ ಪೊಳ್ಳಾಗಿಸಿದೆ; ನ್ಯಾಯಾಲಯಕ್ಕೆ ಹೋಗಿ, 'ಗೆದ್ದವ ಸೋತ, ಸೋತವ ಸತ್ತ' ಎಂಬುದು ಇಂದಿನ ವಾಸ್ತವವಾಗಿದೆ.

5) ವಾಕ್ ಸ್ವಾತಂತ್ರ್ಯ:- ಪ್ರತಿಭಾವಂತನಿಗೆಲ್ಲಿದೆ ಮಾತನಾಡುವ ಅವಕಾಶ? ಸಮಾರಂಭ, ಉದ್ಘಾಟನೆ, ಶಂಕುಸ್ಥಾಪನೆ, ನಾಡಹಬ್ಬ, ರಾಷ್ಟ್ರಹಬ್ಬ ಎಲ್ಲವೂ ಮಂತ್ರಿಗಳ ಅಥವಾ ಸ್ಥಳೀಯ ಪುಢಾರಿಗಳ ಸ್ವತ್ತಾದಾಗ ಪ್ರತಿಭಾವಂತನಿಗೆ ಸಮಾಜದ ಅಂಕುಡೊಂಕುಗಳನ್ನು ತಿಳಿಹೇಳುವ ಅವಕಾಶವೆಲ್ಲಿ? ಪ್ರತಿಭಾವಂತನೊಬ್ಬ ಪ್ರತ್ಯೇಕ ವೇದಿಕೆಯೊಂದನ್ನೇರ್ಪಡಿಸಿದಲ್ಲಿ ಆ ಕ್ಷೇತ್ರದ ಪುಢಾರಿಗಳಿಗೆ ಚುನಾವಣೆ ನೆನಪಿಗೆ ಬಂದು ಘರ್ಷಣೆಗೆ ಪ್ರೇರಣೆ ದೊರೆಯುತ್ತದೆ.

ಹೀಗೆ....ಇನ್ನುಳಿದ ಹಕ್ಕುಗಳ ಬಗ್ಗೆ ಹೇಳದಿರುವುದೇ ಲೇಸು. ಹೇಳುತ್ತಾ ಹೋದಲ್ಲಿ ಸ್ವಾತಂತ್ರ್ಯೋತ್ಸವ ಒಂದು ದುರಂತ ಕಾದಂಬರಿಯಾದೀತು.

ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖವಾದರೂ, ಆಡಳಿತ ಯಂತ್ರ ಮತ್ತು ಅಧಿಕಾರವರ್ಗಗಳು ಪ್ರಜಾವರ್ಗಕ್ಕೆ ಕರ್ತವ್ಯವನ್ನು ಮಾತ್ರಾ ಅಚ್ಚುಕಟ್ಟಾಗಿ ನೆನಪಿಸುತ್ತಾ, ಹಕ್ಕುಗಳನ್ನು ತಾವೇ ಗುತ್ತಿಗೆ ಮಾಡಿಕೊಂಡಿವೆ. ಹಕ್ಕಿಗೆ ತುಕ್ಕು ಹಿಡಿದಿದೆ, ಸ್ವಾತಂತ್ರ ಅತಂತ್ರವಾಗಿದೆ, ಅಹಿಂಸೆ ಹಿಂಸೆಯ ರೂಪ ತಾಳಿದೆ, ಆಳುವವರು ಅಸುರರಾಗುತ್ತಿದ್ದಾರೆ, ಅಧಿಕಾರಿಗಳು ಅಂಧರಾಗುತ್ತಿದ್ದಾರೆ, ಬುದ್ಧಿಜೀವಿಗಳು ಬಂದೂಕಿಗೆ ಬಲಿಯಾಗುತ್ತಿದ್ದಾರೆ. ಹತ್ತಿಕ್ಕಲ್ಪಟ್ಟ ಪ್ರಾದೇಶಿಕ ಜನಸಮೂಹಗಳ ಆಶೋತ್ತರಗಳು ಹತಾಶೆಯನ್ನು ಹಬ್ಬಿಸುತ್ತಿವೆ. ಇದರಿಂದ ಹುಟ್ಟುವ ಪ್ರತ್ಯೇಕತಾ ಭಾವನೆಯಿಂದ ರಾಜ್ಯ-ರಾಜ್ಯಗಳು, ಪ್ರದೇಶ-ಪ್ರದೇಶಗಳು ಬಡಿದಾಡುತ್ತಿವೆ. ಸ್ವಾತಂತ್ರ್ಯದ ಮೂಲ ತಿರುಳಾದ, ಪ್ರಜೆಗಳ, ಪ್ರಜಾ ಸಮೂಹಗಳ ಸ್ವಯಮಾಧಿಕಾರದ ಕಲ್ಪನೆಗೆ ವಿಷವುಣಿಸಲಾಗಿದೆ.

ಅಹಿಂಸೆಯ ಮೂಲ ಮಂತ್ರದಿಂದ ಉದ್ಭವಿಸಿದ, ಸ್ವಾತಂತ್ರ್ಯ ಚಳುವಳಿಯ ಯಶಸ್ಸಿನಿಂದ ಹುಟ್ಟಿದ ಸ್ವಾತಂತ್ರ್ಯ ಚಿಗುರಿ ಹೆಮ್ಮರವಾಗಿ ಬೆಳೆದು ಫಲ ಕೊಡಬೇಕಾಗಿದ್ದ ಈ 38 ವರ್ಷಗಳಲ್ಲಿ ಏನಾಗಿದೆ?

ಸ್ವಾತಂತ್ರ್ಯ ಸ್ವರ್ಗಸ್ಥವಾಗಿದೆ. ಅದರ ಶ್ರಾದ್ಧ ನಿಯಮಿತವಾಗಿ ನಡೆಯುತ್ತಿದೆ.

—ಸೂರ್ಗೋಡು **ಕೃಷ್ಣಮೂರ್ತಿ.**

'ಗ್ರಾಮ ಕಾವಲು ಸಮಿತಿ' -ಭ್ರಷ್ಟಾಚಾರದ ವಿರುದ್ಧ ಶೃಂಗೇರಿ ತಾ॥ನಲ್ಲೊಂದು ಹೊಸ ಪ್ರಯೋಗ

ಸರ್ಕಾರಿ ಕಚೇರಿಗಳಲ್ಲಿರುವ ಭ್ರಷ್ಟಾಚಾರದ ವಿರುದ್ಧ ಹೋರಾಡಲು ಶೃಂಗೇರಿ ತಾಲ್ಲೂಕಿನ ವಿದ್ಯಾರಣ್ಯಪುರ, ಉಳವಳ್ಳಿ ಗ್ರಾಮಗಳ ಜನ 'ಗ್ರಾಮ ಕಾವಲು ಸಮಿತಿ' ಎಂಬ ಹೊಸದೊಂದು ಪ್ರಯೋಗ ಆರಂಭಿಸಿದ್ದಾರೆ.

ನಾಗರೀಕರ ಕಾನೂನುಬದ್ಧ ಮತ್ತು ನ್ಯಾಯ ಸಮ್ಮತ ಕೆಲಸಗಳನ್ನು ಮಾಡಿಕೊಡಲು ನಿರಾಕರಿಸುವ, ಸತಾಯಿಸುವ ಅಥವಾ ಲಂಚ ಕೇಳುವ ಅಧಿಕಾರಿ/ನೌಕರರ ಬಗ್ಗೆ ನೊಂದವರು ಈ ಸಮಿತಿಗೆ ದೂರು ನೀಡಿದಲ್ಲಿ, ಅದನ್ನು ವಿಮರ್ಶೆ ಮಾಡಿ, ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮತ್ತು ತಾಲ್ಲೂಕು 20 ಅಂಶ ಸಭೆಯಲ್ಲಿ ಚರ್ಚಿಸುವಂತೆ ಜಿಲ್ಲಾ ಮಂತ್ರಿಗಳನ್ನು ಕೋರಲಾಗುತ್ತದೆ. ದೂರುದಾರರ ಹೆಸರನ್ನು ವಿಚಾರಣೆಯಲ್ಲಿ ಮಾತ್ರ ಬಹಿರಂಗಪಡಿಸಲಾಗುತ್ತದೆ.

ಈ ಸಮಿತಿಗೆ ಹಾರ್‍ತ್ಳು ಚಂದ್ರೇಗೌಡ ಸಂಚಾಲಕರು ಹಾಗೂ ಹೆಚ್.ಜಿ. ಶಿವಪ್ಪ ಹೆಗ್ಡೆ. ಬಿ. ಎಂ. ಗಣೇಶಯ್ಯ, ವಿ. ರಾಮಭಟ್ ಮತ್ತು ಬಿ.ಕೆ. ಶೇಷಗಿರಿಯಪ್ಪ ಸದಸ್ಯರಾಗಿದ್ದಾರೆ.

ಗ್ರಾಮಸ್ಥರು ಈ ಸೌಕರ್ಯವನ್ನು ಸದುಪಯೋಗಪಡಿಸಿಕೊಳ್ಳಲು, ಆದರೆ ನಿಷ್ಠಾವಂತ ಅಧಿಕಾರಿಗಳ ತೇಜೋವಧೆಗೆ ಬಳಸಿಕೊಳ್ಳದಿರಲು ಹಾಗೂ ಬೇರೆ ಗ್ರಾಮಗಳವರೂ ಇಂಥದೇ ಸಮಿತಿಗಳನ್ನು ರಚಿಸಿ ಭ್ರಷ್ಟಾಚಾರ ನಿರ್ಮೂಲನೆಗೆ ಶ್ರಮಿಸಲು ಮೇಲ್ಕಂಡ ಸಮಿತಿ ಮನವಿ ಮಾಡಿದೆ.

101 ವರ್ಷ ಹಿಂದಿದ ಕನ್ನಡ ದಿನಪತ್ರಿಕೆ

ಇಂದಿಗೆ ಸರಿಯಾಗಿ 101 ವರ್ಷಗಳ ಹಿಂದೆ ಪ್ರಕಟವಾಗುತ್ತಿದ್ದ ರಾಜ್ಯಮಟ್ಟದ ಕನ್ನಡ ವಾರಪತ್ರಿಕೆಯೊಂದು ಶೃಂಗೇರಿಯ ನಿವಾಸಿ ಚಿನಿವಾರ ರಾಜಶೇಖರಯ್ಯನವರ ಮನೆಯಲ್ಲಿದ್ದ ಹಳೇ ಕಾಲದ ಸಂಗ್ರಹವೊಂದರಲ್ಲಿದ್ದುದು ಈಚಿಗೆ ಬೆಳಕಿಗೆ ಬಂದಿದೆ.

ಈ ಪತ್ರಿಕೆಯ ಹೆಸರು "ಕರ್ಣಾಟಕ ಪ್ರಕಾಶಿಕಾ" ಎಂದು. ಅದರ 11 ನೇ ಸಂಪುಟದ 35 ನೇ ಸಂಚಿಕೆ— ಸೋಮವಾರ, ಸೆಪ್ಟೆಂಬರ್ 1, 1884ರದು—ಈಗ ದೊರೆತಿರುವುದು. ಅದರ ಸಂಪಾದಕರು ಯಾರೆಂದು ಎಲ್ಲಿಯೂ ಪ್ರಕಟಿಸಿಲ್ಲ. ಆದರೆ ಅದರಲ್ಲಿರುವ ಒಂದು ಜಾಹೀರಾತಿನಲ್ಲಿ 'ಟಿ.ಬಿ. ವೆಂಕಟಾಚಾರ್, ಮ್ಯಾನೇಜರ್, ಕ.ಪ್ರ.' ಎಂದಿದೆ. ಪತ್ರಿಕೆಯ ಕೊನೆಯಲ್ಲಿ, "Bangalore: printed and published for the proprietor, at the Karnatic press, 1884" ಎಂದು ಮುದ್ರಿಸಿದೆ.

ಉತ್ತಮ ಭಾಷೆ

ಈ ಪತ್ರಿಕೆಯ ಭಾಷೆ ಉತ್ತಮವಾಗಿದೆ. ವಾಕ್ಯಗಳು ಸ್ಪಷ್ಟವಾಗಿ, ವ್ಯಾಕರಣಬದ್ಧವಾಗಿವೆ. ಆದರೆ ಬಹುಶಃ ಆಗಿನ ಕಾಲದ ರೂಢಿಯಂತೆ ಸಂಸ್ಕೃತಭೂಯಿಷ್ಠವಾಗಿ ಉದ್ದುದ್ದವಾಗಿವೆ. ಆಗ ಕನ್ನಡ ಲಿಪಿಯಲ್ಲಿ ತೆಲುಗಿನಂಥ ಅಕ್ಷರಗಳು ಬಹಳ ಇರುತ್ತಿದ್ದವೋ ಏನೋ. ಅಂತೂ ಇಲ್ಲಿ ತೆಲುಗಿನ ಅಕ್ಷರಗಳು ವಿಪುಲವಾಗಿವೆ. ಉದಾ: ಐತ್ವ, ರ–ವತ್ತು, ಪ, ಹ, ಇತ್ಯಾದಿ. ಅಚ್ಚಿನ ದೋಷಗಳು ಅತೀ ಕಡಿಮೆ ಇವೆ. (ಇಲ್ಲವೇ ಇಲ್ಲ ಎಂಬಷ್ಟು.)

ಎಲ್ಲಕ್ಕಿಂತ ಮುಖ್ಯವಾಗಿ ಆ ಕಾಲದಲ್ಲೇ ರಾಜ್ಯಕ್ಕೆ 'ಕರ್ಣಾಟಕ'ವೆಂಬ ಹೆಸರು ಚಾಲ್ತಿಯಲ್ಲಿದ್ದುದರ ಬಗ್ಗೆ ರಾಜಶೇಖರಯ್ಯನವರು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತಾರೆ.

ಜೋಡಣೆಯ ವಿನ್ಯಾಸ ಇಲ್ಲ

ಈಗಿನ ಪತ್ರಿಕೆಗಳಲ್ಲಿ ಶೀರ್ಷಿಕೆಗಳಿಗೆ ವಿವಿಧ ಸೈಜಿನ ದಪ್ಪಕ್ಷರಗಳ ಬಳಕೆ, 2, 3 ಕಾಲಂಗಳ ಬಳಕೆ, ಅವುಗಳ ಜೋಡಣೆಗೊಂದು ವಿನ್ಯಾಸ—ಎಲ್ಲ ಇರುವಂತೆ ಆಗ ಇಲ್ಲ. ಎಲ್ಲಾ ಒಂದೇ ಸೈಜು ಅಕ್ಷರ, ಒಂದೇ ಕಾಲಂ ಶೀರ್ಷಿಕೆ. ಜೋಡಣೆಗೆ ಯಾವುದೇ ವಿನ್ಯಾಸವಿಲ್ಲ– ಒಂದಾದ ಮೇಲೆ ಒಂದು ವಿಷಯ. ಇನ್ನೂ ವಿಶೇಷವೆಂದರೆ ಎಲ್ಲ ವಿಷಯಗಳಿಗೂ ಶೀರ್ಷಿಕೆ ಮಾತ್ರ ಇಂಗ್ಲೀಷಿನಲ್ಲೇ ಇವೆ. ಅಲ್ಲದೆ ಜಾಹೀರಾತುಗಳು, ಪತ್ರಿಕೆಯ ಚಂದಾ ವಿವರ ಎಲ್ಲವೂ ಮುಖಪುಟದಲ್ಲೇ, ಆರಂಭದಿಂದಲೇ ಇವೆ. ಅವೆಲ್ಲ ಮುಗಿದ ಮೇಲೆ ವಿಷಯ ನಿರೂಪಣೆ ಆರಂಭ.

ಅಂಕಣಗಳಂಥ ಕೆಲವು ಶೀರ್ಷಿಕೆಗಳು ಹೀಗಿವೆ: Local & Provincial News ಒಳದೇಶ ಮತ್ತು ತಾಲ್ಲೂಕು-ಜಾತ್ ವೃತ್ತಾಂತಗಳು; Occasionol

(ಮೂರನೇ ಪುಟಕ್ಕೆ)

ದುಗರ ಪತ್ರಗಳು

ಡವರಿಗೆ 'ಹಸಿರುಕಾರ್ಡು' ಕೊಡುವ ಸಮೀಕ್ಷೆ ಬಗ್ಗೆ ಅನುಮಾನ: ಡಿ. ಸಿ. ಗೆ ಪತ್ರ

ಕೊಪ್ಪ ತಾ|| ಬೆಳವಿನಕೊಡಿಗೆ ನೃತ್ತದ ಜೆಪಿ ಅಧ್ಯಕ್ಷರು ಜಿಲ್ಲಾಧಿಕಾರಿಗಳಿಗೆ ಬರೆ ಪತ್ರದ ಮುಖ್ಯಾಂಶ ಇಲ್ಲಿದೆ:

ಸರ್ಕಾರ ಬಡವರಿಗೋಸ್ಕರ ಕೊಡಲು ರಿಸಿರುವ ಅಗ್ಗದ ಅಕ್ಕಿ, ಮಾಂಗಲ್ಯ ಭಾಗ್ಯ ಹಾಗೂ ಸೀರೆ, ಧೋತಿ, ಅಲ್ಲದೆ ಬ್ಯಾಂಕುಗಳಲ್ಲಿ ಅಗತ್ಯವಿರುವ ಸೌಲಭ್ಯಕ್ಕಾ ಸಾಲ ಪಡೆಯಲು ಸಹಾಯವಾಗುವಂತೆ ಡವರನ್ನು ಗುರುತಿಸಿ ಪಟ್ಟಿ ಮಾಡುವ ಕಾರ್ಯ ಆಯಾ ಪಂಚಾಯ್ತಿ ಮಟ್ಟದಲ್ಲಿ ಗ್ರಾಮ ಸಭೆಗಳ ಮೂಲಕ ಈಗಾಗಲೇ ಮು ಕ್ತಾಯವಾಗಿದೆಯಷ್ಟೆ. ಇದು ಸ್ವಾಗತಾ ರ್ಹ.

ಈ ಪಟ್ಟಿಯ ಪ್ರಕಾರ ನಂಬರ್ ಸಹಿತ ಕಾರ್ಡು ಕೊಟ್ಟು ಮುಂದೆ ಸೌಲಭ್ಯ ನೀಡ ಲು ಇದನ್ನೇ ಆಧಾರವಾಗಿಟ್ಟುಕೊಳ್ಳುವುದು ಸರ್ಕಾರದ ನೀತಿ. ಅಂದರೆ ಇದಕ್ಕೆ ಆರ್ಥಿಕ ವಾಗಿ ಹಿಂದುಳಿದಿರುವಿಕೆಯೇ ಪ್ರಧಾನ ಎಂ ಬುದು ಸ್ಪಷ್ಟ. ಆದರೆ ಈಗ **ಬಡವ ಮತ್ತು ಮನೆ ಇದ್ದವರು** ಎಂದು ಮಾತ್ರ ಗುರುತಿಸಲಾಗಿದೆ. ಇದು ಸರಿಯೇ? ಯಾಕೆಂ ದರೆ ಸ್ವಂತ ಮನೆ ಮಾಡಿಕೊಳ್ಳಲು ಸಹ ಸಾಧ್ಯವಿಲ್ಲದಿರುವಂಥ ಸಣ್ಣ, ಅತಿಸಣ್ಣ ರೈತ ಹಾಗೂ ಕೃಷಿ ಕಾರ್ಮಿಕರು ತುಂಬಾ ಜನ ಇದ್ದಾರೆ. ಮನೆ ಇಲ್ಲದವರಿಗೆಲ್ಲಾ ಮನೆ ಅಥ ವಾ ಆ ಸಂಬಂಧ ಅನುಕೂಲ ಮಾಡಿಕೊಡು ವ ಸರ್ಕಾರಿ ಕಾರ್ಯ ಈಗ ಮುಗಿದಿದೆಯೇ? ಎಷ್ಟೋ ಜನರಿಗೆ ಕೆಲವು ವರ್ಷದಿಂದ ಜನ ತಾ ಮನೆಗಳು ಸಿಕ್ಕಿಲ್ಲ. ಲೋ ಕಾಸ್ಟ್‌ನಲ್ಲೂ ಸಹ ಪೂರ್ತಿಗೊಂಡಿಲ್ಲ. ಕೆಲವರಂತೂ ಯಾ ರ ಮನೆಯಲ್ಲೋ 'ವಾಸ' ಮಾಡುತ್ತಾರೆ. ದೊಡ್ಡ ಕುಟುಂಬದವರು ಪಾಲಾಗಿ ಬೇರೆ ಬೇರೆ ವ್ಯವಸಾಯ ಅಥವಾ ಕೆಲಸ ಮಾಡಿ ಕೊಂಡು ಒಂದೇ ಮನೆಯ ಅಕ್ಕಪಕ್ಕದಲ್ಲಿ ವಾಸಿಸುವವರೂ ಇದ್ದಾರೆ. ಸರ್ಕಾರಿ ಲೆಕ್ಕ ದಲ್ಲಿ ಮನೆ ಇಲ್ಲದಿರುವ, ಆದರೆ ಯಾರದೋ ಜಮೀನಿನ ಅಜು-ಬಾಜಿನಲ್ಲಿ ಗುಡಿಸಲು ಕ ಟ್ಟಿಕೊಂಡಿರುವವರೂ ಬಹಳ ಜನ ಇದ್ದಾರೆ. ಇದು ಆರ್ಥಿಕ ನಿಸ್ಸಹಾಯಕತೆ. ಹೀಗಿರು ವಾಗ ಮನೆ ಇದ್ದಾಗೆ ಮಾತ್ರ ನಂಬರು ಕೊಡುವ ನಿರ್ಧಾರ ಯಾವ ನ್ಯಾಯ? ಇಲ್ಲ ದವರು ಎಲ್ಲಿಗೆ ಹೋಗಬೇಕು? ಯಾರನ್ನು ಕೇಳಬೇಕು? ತಾ. 26-7-85 ರಂದು ನ ಮ್ಮ ಬೆಳವಿನಕೊಡಿಗೆ ಪಂಚಾಯ್ತಿಯ ಗ್ರಾ ಮಸಭೆಯಲ್ಲಿ ಕೊಪ್ಪ ತಾ|| ಜನತಾ ಪಕ್ಷದ ಅಧ್ಯಕ್ಷರು ಮೇಲ್ಕಂಡಂತೆ ಮನೆ ಇದ್ದವರಿಗೆ ಮಾತ್ರ ಎಂದು ವಾದಿಸಿ ಆ ರೀತಿ ಪಟ್ಟಿ ಮಾಡಿಸಿರುತ್ತಾರೆ. ಆದ್ದರಿಂದ, ಸರ್ಕಾರದ ಕಾನೂನಿನಂತೆ ಬಡವರು ಯಾರು, ಯಾವ ರೀತಿ ಪಟ್ಟಿ ಮಾಡಿ ಅವರು ನಂಬರು ಪಡೆ ಯಬೇಕು? ಮನೆ ಇಲ್ಲದವರಿಗೆ ಈ ಸವಲತ್ತು ಸಿಕ್ಕುವುದಿಲ್ಲವೇ? ಅಥವಾ ಮುಂದೆ ಸರಿಪಡಿ ಸಿ ಅವರಿಗೂ ಸವಲತ್ತು ಸಿಕ್ಕುವಂತೆ ಮಾ ಡಬಹುದೇ? ಎಂಬುದಕ್ಕೆ ನಾನು ಗ್ರಾ ಮಸ್ಥರ ಪರವಾಗಿ ತಮ್ಮಲ್ಲಿ ವಿವರಣೆ ಮ ತ್ತು ಸಮಾಧಾನವನ್ನು ಬಯಸುತ್ತೇನೆ.

ಅಲ್ಲದೆ ಈಗಾಗಲೇ ನೀಡಿದ ಐಆರ್‌ಡಿಪಿ ಸಾಲಗಳಿಗೆ ಸಬ್ಸಿಡಿ ಬಿಡುಗಡೆಯಾಗದ ಕಾ ರಣ ಎಲ್ಲಾ ಬ್ಯಾಂಕಿನವರು ಮತ್ತೆ ಸಾಲ ಕೊಡಲು ನಿರಾಕರಿಸುತ್ತಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಎಲ್ಲಾ ಬ್ಯಾಂಕುಗಳಿಗೂ ಸಬ್ಸಿಡಿ ಬರುವಂತೆ ಮಾಡಿ ಅಥವಾ ಆ ಬಗ್ಗೆ ಭರವಸೆ ಕೊಟ್ಟು ಐ.ಆರ್.ಡಿ.ಪಿ. ಸಾಲಗಳ ಮಂಜೂರಾತಿಗೆ ಕೂಡಲೆ ನಿಗಾವಹಿಸ ಬೇ ಕಾಗಿಯೂ ತಮ್ಮನ್ನು ಕೋರುತ್ತೇನೆ.

(ಸಹಿ) ಚಂದ್ರಶೇಖರ ಜೋಯಿಸ್.

ಪ್ರಜಾ ಪ್ರಭುತ್ವವೋ?? ಪ್ರಜೆಗಳಿಗೆ ಪ್ರಭುತ್ವವೋ??

ಮಾನ್ಯರೆ,

ಹಾಲ್ಮುತ್ತೂರು ಗ್ರಾಮದ ಸರ್ವೆ ನಂಬ್ರ 109 ನೇ ಸರ್ಕಾರಿ ಗೋಮಾಳ ಸುಮಾರು 200 ಎಕ್ರೆ ಪ್ರದೇಶದಲ್ಲಿದ್ದು, ಅದರಲ್ಲಿ ಕೆಲ ವಷ್ಟು ದರಖಾಸ್ತು ಪಡೆದು ಜಮೀನಾಗಿ, ಹಾಲಿ ಸುಮಾರು 150 ಎಕ್ರೆಯಷ್ಟು ಉಳಿ ದಿದೆ. ಅದನ್ನೂ ಸಹ ಈಗ ಅರಣ್ಯ ಇಲಾಖೆ ಯವರು ಕಾಡು ಬೆಳೆಸುವ ಸಲುವಾಗಿ ಊರ ಮಧ್ಯದಲ್ಲಿರತಕ್ಕ ಇದೊಂದೇ ನಂಬರ ಪ್ರದೇ ಶದಲ್ಲಿ ಗುಳಿಮಾಡಿ ಸುತ್ತಲೂ ತಂತಿಬೇಲಿ ಹಾಕಿ ಗಿಡ ನೆಡಿಸಲು ಪ್ರಾರಂಭಿಸಿದ್ದಾರೆ.

ಈ ಪ್ರದೇಶದ ಸುತ್ತಲೂ ಇರುವ ಹತ್ತು ಹಳ್ಳಿಗಳ ಸುಮಾರು 60 ಕ್ಕೂ ಹೆಚ್ಚು ರೈತ ಕುಟುಂಬಗಳವರು ಹಿಂದೆ ಪರಕೀಯರ ಆಳ್ವಿ ಕೆಯ ಕಾಲದಿಂದಲೂ ಸಹ ಈ ಪ್ರದೇಶ ವನ್ನು ಜಮೀನು ವ್ಯವಸಾಯಕ್ಕೆ ಬೇಕಾ ಗುವ ಸೊಪ್ಪು, ದರಗು, ಜಾನುವಾರುಗಳ ಮೇವಿಗೂ ಉಪಯೋಗಿಸಿಕೊಳ್ಳುತ್ತಿದ್ದರು. ಈಗ ಈ ರೈತರಿಗೆ ಒಂದೂವರೆ ಕಿಲೋ ಮೀಟರ್‌ಒಳಗೆ ಇಷ್ಟಕ್ಕೂ ಅನುಕೂಲವಿಲ್ಲ ವಾಗಿದೆ. ಅಷ್ಟು ದೂರ ಹೋದರೂ, ಅಲ್ಲಿರ ತಕ್ಕ ರೈತರು ಬಿಡುವುದಿಲ್ಲ.

ಈ ವಿಚಾರವನ್ನು ಸಂಬಂಧಪಟ್ಟವರಲ್ಲಿ ಮನವಿ ಮಾಡಿಕೊಂಡಾಗ್ಯೂ ಫಲಕಾರಿ ಯಾಗಿರುವುದಿಲ್ಲ. ನಮ್ಮ ನಾಯಕರು ಈ ಊರಿಗೆ ತಾ. 14.6.85 ರಂದು ಬಂದಿ ದ್ದಾಗ ಪ್ರತ್ಯಕ್ಷವಾಗಿ ತೋರಿಸಿ ಅರ್ಜಿ ಕೊ ಟ್ಟಾಗ್ಯೂ ಕೆಲಸ ಮುಂದುವರಿಯುತ್ತಲೇ ಇದೆ. ಇನ್ನು ಮುಂದೆ ನಾವುಗಳು ಏನು ಮಾಡಬೇಕೆಂಬುದೇ ತೋಚದಾಗಿದೆ.

—ನೊಂದ ರೈತರು,
(19 ಜನರ ಸಹಿಗಳಿವೆ.)
ಹಾಲ್ಮುತ್ತೂರು.

101 ವರ್ಷ ಹಿಂದಿನ ಪತ್ರಿಕೆ

(ಎರಡನೇ ಪುಟದಿಂದ)

Note ನೈಮಿತ್ತಿಕ ವಿಷಯ ನ್ಯಾಸ; Telegraphic Summary ತಂತಿ ವೃತ್ತಾಂತ (ಇದರಲ್ಲಿ ಚೀನಾದಲ್ಲಿ ನಡೆಯುತ್ತಿದ್ದ ಯುದ್ಧ ಮತ್ತು ಅದಕ್ಕೆ ಸಂಬಂಧಪಟ್ಟ ಸುದ್ದಿಗಳ ತುಣುಕು ಸಂಗ್ರಹವಿದೆ.); Summary of News ವೃತ್ತಾಂತ ಸಂಗ್ರಹವು; ಇತ್ಯಾದಿ.

ದು ಬಾ ರಿ ಚಂ ದಾ

ಪತ್ರಿಕೆಯ ಬೆಲೆ ಮತ್ತು ಚಂದಾ ಆಗಿನ ಕಾಲಕ್ಕೆ ಸಾಕಷ್ಟು ದುಬಾರಿಯಾಗಿಯೇ ಇವೆ. (ನಮ್ಮ ಪತ್ರಿಕೆಯ ಪುಟದ ಎರಡರಷ್ಟು ದೊಡ್ಡ ಸೈಜಿನ ನಾಲ್ಕು ಪುಟಗಳು) ಬಿಡಿ ಪ್ರತಿಗೆ ೦-೭-೦ (ನಾಲ್ಕು ಆಣೆ); ತಿಂಗಳಿಗೆ ೦-೮-೦, ಕನ್ನಡ ಅಥವಾ ಇಂಗ್ಲೀಷ್ ಆವೃತ್ತಿಗೆ ವರ್ಷಕ್ಕೆ ೬-೦-೦; ಎರಡನ್ನೂ ತೆಗೆದುಕೊಳ್ಳತಕ್ಕವರಿಗೆ ವರ್ಷಕ್ಕೆ ೧೨-೦-೦, ಹಿಂದಿನ ಸಂಚಿಕೆ ೧ಕ್ಕೆ ೦-೫-೦.

ಅ ಪೂ ರ್ವ ಸಂ ಗ್ರ ಹ

ರಾಜಶೇಖರಯ್ಯನವರ ಮನೆಯಲ್ಲಿ ಆ ಕಾಲದ ಇಂಥ ಇನ್ನೂ ಹಲವು ಅಪೂರ್ವ ವಸ್ತುಗಳ ಸಂಗ್ರಹವಿದೆ. ಅವರದು ಶೃಂಗೇರಿಯ ಅತ್ಯಂತ ಹಳೆಯ ಮನೆತನಗಳಲ್ಲೊಂದಾಗಿದ್ದು, ಅವರ ಅಜ್ಜ ದಿ|| ಚಿನಿವಾಲ ಧರಣಯ್ಯ ಶೆಟ್ಟರು ಶೃಂಗೇರಿ ಜಹಗೀರಿಯ 'ಪಟ್ಟಣ ಶೆಟ್ಟಿ'ಯವರಾಗಿದ್ದರು (ಒಂದು ಹಿರಿಯ ಗೌರವದ ಅಂತಸ್ತು.) ಧರ್ಮಸ್ಥಳದ ಹೆಗ್ಗಡೆಯವರ ಮನೆತನಕ್ಕೂ ಇವರಿಗೂ ಹತ್ತಿರದ ಸಂಬಂಧ.

ಅವರ ಸಂಗ್ರಹದಲ್ಲಿ ಆಗಿನ ಕಾಲದ ಹಲವು ಫೋಟೋಗಳು, ಕೋರ್ಟ್ ವ್ಯವಹಾರದ ಕಾಗದ ಪತ್ರಗಳು, ಹಲವು ಆಹ್ವಾನ ಪತ್ರಿಕೆಗಳು, ಅಂಚೆ ಕವರ್ ಮತ್ತು ಮನಿಯಾರ್ಡರ್ ಫಾರ್ಮ್‌ಗಳು (ಇವು ಕನ್ನಡದಲ್ಲಿವೆ)— ಇತ್ಯಾದಿ ವಿವಿಧ ವಸ್ತುಗಳಿವೆ.

ಇಲ್ಲಿರುವ ಆಹ್ವಾನ ಪತ್ರಿಕೆಗಳಲ್ಲಿ ಧರ್ಮಸ್ಥಳದ ದಿ|| ರತ್ನವರ್ಮ ಹೆಗ್ಗಡೆಯವರ ಅಜ್ಜನವರ ಮದುವೆಯ ಕರೆಯೋಲೆ, ರತ್ನವರ್ಮ ಹೆಗ್ಗಡೆಯವರು ಹುಟ್ಟಿದ್ದು, ಅವರ ಚೌಲದ್ದು, 1918 ಮತ್ತು 19ರಲ್ಲಿ ಬ್ರಿಟಿಷ್ ಚಕ್ರವರ್ತಿಯ ವಿಜಯೋತ್ಸವವನ್ನು ಆಚರಿಸಿದ ಕಾರ್ಯಕ್ರಮದ ಆಹ್ವಾನ, ಇತ್ಯಾದಿ ಕೆಲವು ಅಪರೂಪದ ಪತ್ರಿಕೆಗಳಿವೆ.

ಇಲ್ಲಿ ಇನ್ನೂ ಏನೇನಿದೆಯೆಂದು ತಾನಿನ್ನೂ ಪೂರ್ತಿ ನೋಡಿಲ್ಲವೆಂದು ರಾಜಶೇಖರಯ್ಯ ಹೇಳುತ್ತಾರೆ. ಒಟ್ಟಿನಲ್ಲಿ ಇಂಥ ವಿಷಯಗಳಲ್ಲಿ ಆಸಕ್ತರಾಗಿರುವವರಿಗೆ ಇದೊಂದು ಬಹಳ ಉಪಯುಕ್ತ ಮತ್ತು ಕುತೂಹಲ ಹುಟ್ಟಿಸುವ ಸಂಗ್ರಹವಾಗಿದ್ದು, ಅವನ್ನು ನೋಡುವ ಅಪೇಕ್ಷೆ ಯಾರಿಗಾದರೂ ಇದ್ದರೆ ತಮ್ಮ ಬಿಡುವಿನ ವೇಳೆಯಲ್ಲಿ ಅವನ್ನು ತೋರಿಸಲು ಸಿದ್ಧವೆಂದು ಅವರು ಹೇಳಿದ್ದಾರೆ.

ಸರ್ಕಾರಿ ಪ್ರೌಢಶಾಲೆಗಳ ದುಃಸ್ಥಿತಿ: ಒಂದು ಸಮೀಕ್ಷೆ

ನಮ್ಮ ಮಲೆನಾಡಿನಲ್ಲಿ ಶಾಲೆಗಳಿರುವುದೇ ಬಹಳ ದೂರ ದೂರ. ಅದರಲ್ಲೂ ಪ್ರೌಢಶಾಲೆಗೆಂದರೆ ದಿನವೂ 6 ರಿಂದ 8 ಮೈಲಿಯಷ್ಟು ನಡೆಯುವ ವಿದ್ಯಾರ್ಥಿಗಳೂ ಇದ್ದಾರೆ.

ಮಳೆ-ಬಿಸಿಲುಗಳ ಕಷ್ಟವನ್ನೆಲ್ಲ ಅನುಭವಿಸಿ ಇಷ್ಟು ದೂರದಿಂದ ಶಾಲೆಗೆ ಬಂದರೂ ಮಕ್ಕಳಿಗೆ ಈ ಶಾಲೆಗಳು ಕಲಿಯುವ ಆಸಕ್ತಿ ಮೂಡಿಸಲಾಗಲಿ, ಕ್ರೀಡಾ ಸಾಮಗ್ರಿ, ವಾಚನಾಲಯ, ಪ್ರಯೋಗ ಶಾಲೆಗಳಂಥ ಸೌಕರ್ಯಗಳನ್ನು ಒದಗಿಸಲಾಗಲಿ, ಕಡೆಗೆ—ಇದ್ದ ಪಾಠಗಳನ್ನಷ್ಟಾದರೂ ಕ್ರಮಬದ್ಧವಾಗಿ ಬೋಧಿಸಲು ಅಧ್ಯಾಪಕರುಗಳನ್ನು ಹೊಂದಿರಲಿಕ್ಕಾಗಲಿ ವಿಫಲವಾದರೆ ಆ ಮಕ್ಕಳ ಭವಿಷ್ಯವೇನು?

ಈ ಸಲದ ಕೆಲವು ಶಾಲೆಗಳ ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ಗಮನಿಸಿದರೆ ಈ ಚಿಂತಾಜನಕ ಪರಿಸ್ಥಿತಿ ವ್ಯಕ್ತವಾಗುತ್ತದೆ. ಬೇರೆ ಹಲವು ಕಡೆಗಳಲ್ಲೂ ಪರಿಸ್ಥಿತಿ ಹೆಚ್ಚು ಭಿನ್ನವಾಗೇನೂ ಇಲ್ಲ. ಈ ಕೊರತೆಗಳ ಶಾಪ ಪಟ್ಟಣಗಳಿಗಿಂತ ಹಳ್ಳಿಗಳ ಶಾಲೆಗೆ ಹತ್ತು ಪಟ್ಟು ಕ್ರೂರವಾಗುತ್ತದೆಂಬುದನ್ನು ಮರೆಯುವಂತಿಲ್ಲ.

ಈ ಕುರಿತು ಕಲ್ಕುಳಿ ವಿಠಲ ಹೆಗ್ಡೆ ಅವರ ವಿಶೇಷ ಸಮೀಕ್ಷೆಯ ವರದಿ ಇಲ್ಲಿದೆ. ಇಲ್ಲಿ ಕೇವಲ ಮಾದರಿಯಾಗಿ 2 ಶಾಲೆಗಳನ್ನು ಮಾತ್ರ ಸಮೀಕ್ಷಿಸಲಾಗಿದೆ.

ಶೃಂಗೇರಿ ತಾಲ್ಲೂಕಿನ ಸರ್ಕಾರಿ ಪ್ರೌಢ ಶಾಲೆಗಳ ಎಸ್ಸೆಸ್ಸೆಲ್ಸಿ ಫಲಿತಾಂಶ ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಬಹಳ ಶೋಚನೀಯವಾಗಿದೆ. ಶೃಂಗೇರಿ ಸ|| ಪ್ರೌಢಶಾಲೆಯಲ್ಲಿ ಶೇ. 38 ಫಲಿತಾಂಶವಿದ್ದರೆ, ತೊರೆಹಡ್ಲು (ಅಡ್ಡಗದ್ದೆ) ಸ|| ಪ್ರೌಢಶಾಲೆಯಲ್ಲಿ 44 ಕ್ಕೆ ಕೇವಲ 4 ಜನ (ಶೇ. 9) ತೇರ್ಗಡೆಯಾಗಿದ್ದಾರೆ.

ಈ ಬಗ್ಗೆ ವಿಚಾರಿಸಿದಾಗ ಈ ಎರಡೂ ಶಾಲೆಗಳದೂ ಒಂದೇ ಗೋಳು—"ಎಲ್ಲಾ ಶಾಲೆಗಳಲ್ಲಿ ಆರಿಸಿ ಬಿಟ್ಟವರು ಮಾತ್ರ ನಮ್ಮಲ್ಲಿಗೆ ಬರುತ್ತಾರೆ." ಆದರೆ ಈ ಮಾತು ಪೂರ್ಣ ಸತ್ಯವಲ್ಲ. ಉದಾಹರಣೆಗೆ, ಶೃಂಗೇರಿ ಬಾಲಿಕಾ ಪ್ರೌಢಶಾಲೆಯಲ್ಲಿ 8, 9 ನೇ ತರಗತಿಗಳಲ್ಲಿ ಫೇಲಾದವರ ಪೋಷಕರಿಗೆ ಪತ್ರ ಬರೆದು "ನೀವು ತಡವಾಗಿ ಬಂದರೆ ಸ್ಥಳಾವಕಾಶದ ಒತ್ತಡದಿಂದಾಗಿ ಸೇರಿಸಿಕೊಳ್ಳಲು ಆಗದಿರಬಹುದು. ಆದ್ದರಿಂದ ಆರಂಭದಲ್ಲೇ ಬಂದು ಸೇರಿಸಿ" ಎಂದು ತಿಳಿಸುತ್ತಾರೆ.

ಇದರ ಜೊತೆಗೆ, ಸಾಕಷ್ಟು ಅಧ್ಯಾಪಕರಿಲ್ಲ. ಬಂದವರೂ ಗುತ್ತಿಗೆಮೇಲೆ ಬಂದವರು. ಸಾಮಾನ್ಯವಾಗಿ ಅವರುಗಳಿಗೆ ತರಬೇತಿ ಹಾಗೂ ಮಕ್ಕಳಲ್ಲಿ ಆಸಕ್ತಿ ಕೆರಳಿಸುವ ಬಗ್ಗೆ ತಾಂತ್ರಿಕ ತಿಳುವಳಿಕೆ ಇರುವುದಿಲ್ಲ. ಮೇಲಾಗಿ, ಅವರು ಕಲಿತಿರುವುದೇ ಒಂದು, ಇಲ್ಲಿ ಬೋಧಿಸಬೇಕಾಗುವುದೇ ಒಂದು ಆಗಿರುತ್ತದೆ.

(ನಾಲ್ಕನೆ ಪುಟಕ್ಕೆ)

ಸರ್ಕಾರಿ ಪ್ರೌಢಶಾಲೆಗಳ ದುಃಸ್ಥಿತಿ: ಒಂದು ಸಮೀಕ್ಷೆ

(ಮೂರನೆ ಪುಟದಿಂದ)

ಈ ಎರಡೂ ಶಾಲೆಗಳಲ್ಲಿ ಕಳೆದ ವರ್ಷದ ಮಧ್ಯದವರೆಗೆ ಬಹುತೇಕ ಹುದ್ದೆಗಳು ಖಾಲಿ ಇದ್ದುವಂತೆ. (ಶೃಂಗೇರಿ ಶಾಲೆಯಲ್ಲೇನೋ ಇದರಿಂದ 8 ಮತ್ತು 9 ರ ವಿದ್ಯಾರ್ಥಿಗಳ ಹೊರತು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೇನೂ ಪಾಠಗಳಿಗೆ ತೊಂದರೆಯಾಗಿಲ್ಲವೆನ್ನುತ್ತಾರೆ ಕೆಲ ಅಧ್ಯಾಪಕರು.) ಶೃಂಗೇರಿ ಶಾಲೆಯಲ್ಲಿ ಪ್ರಯೋಗಾಲಯ ಸಾಮಗ್ರಿಗಳಿದ್ದರೂ ಅವು ಇಂದಿನ ಪಾಠಗಳಿಗೆ ಸಂಬಂಧವಿಲ್ಲದವು. ತೊರೆಹಡ್ಲು ಶಾಲೆಯಲ್ಲಿ ಈ ಕುರಿತು ಕೇಳಬೇಕಾದ್ದೇ ಇಲ್ಲ. ಇದಲ್ಲದೆ, ಫಲಿತಾಂಶ ಕಡಿಮೆಯಾಗುವುದಕ್ಕೆ ಕಾರಣವಾಗಿ, ನಮ್ಮಲ್ಲಿ ಪರೀಕ್ಷೆಗಳನ್ನು ಯಾವುದೇ ದುರ್ವ್ಯವಹಾರಕ್ಕೆ ಅವಕಾಶ ಕೊಡದೆ ಕಟ್ಟುನಿಟ್ಟಾಗಿ ಮಾಡುತ್ತೇವೆ ಎಂದು ಅಧ್ಯಾಪಕರು ಹೆಮ್ಮೆಯಿಂದ ಹೇಳುತ್ತಾರೆ.

ಶೃಂಗೇರಿ ಶಾಲೆಯ ಬಗ್ಗೆ ಅಲ್ಲಿನ ಯುವ ಮುಖ್ಯೋಪಾಧ್ಯಾಯರ ಮತ್ತು ಅವರ ಸಹೋದ್ಯೋಗಿಗಳ ಉತ್ಸಾಹ ನೋಡಿ ಭವಿಷ್ಯದ ಬಗೆಗಾದರೂ ಭರವಸೆಯಿಡಬಹುದು. ಆದರೆ ತೊರೆಹಡ್ಲು ಶಾಲೆಯ ಅಧೋಗತಿಯ ಬಗ್ಗೆ ಅಲ್ಲಿ ಪ್ರಪ್ರಥಮಬಾರಿಗೆ ಎಸ್ಸೆಸ್ಸೆಲ್ಸಿ ಕಟ್ಟಿದವರ ಫಲಿತಾಂಶವೇ ಸೂಚಿಸುತ್ತದೆ.

ಈ ಶಾಲೆಯ ಮುಖ್ಯೋಪಾಧ್ಯಾಯರು ಶಾಲೆಗೆ ಬರುತ್ತಿದ್ದುದೇ 12 ಗಂಟೆಯ ನಂತರವಂತೆ. ಅಷ್ಟರೊಳಗೆ ಬೇರೆ ಯಾರಾದರೂ ಅಧ್ಯಾಪಕರು ಬಂದರೆ ಅವರು ಶಾಲೆಯ ಬೀಗ ತೆಗೆದು ಮಕ್ಕಳನ್ನು ಒಳಗೆ ಬಿಡಬೇಕಿತ್ತು. ಇಂಥ ಮುಖ್ಯೋಪಾಧ್ಯಾಯರಿಗೂ ಈಗ ವರ್ಗವಾಗಿದೆ. ಇನ್ನೊಬ್ಬ ಪರಿಣತ ಅಧ್ಯಾಪಕರಿಗೂ ಬೇಗಾರುಶಾಲೆಗೆ ವರ್ಗವಾಗಿದೆಯಂತೆ. ಅವರ ಜಾಗಕ್ಕೆ ಇನ್ನೂ ಯಾರೂ ಬಂದಿಲ್ಲ. ಹೀಗೇ ಮುಂದುವರಿದರೆ ಮುಂದೆ ಈ ಶಾಲೆ ಆದರ ಸ್ಥಾಪನೆಗಾಗಿ ಓಡಾಡಿದ/ಹೋರಾಡಿದ ಊರವರ ಮತ್ತು ರಾಜಕಾರಣಿಗಳ ಶ್ರಮದ ಅವಶೇಷ ಮಾತ್ರ ಆಗಿ ಉಳಿಯುವುದರಲ್ಲಿ ಸಂಶಯವಿಲ್ಲ.

ಶಾಲಾಭಿವೃದ್ಧಿ ಸಮಿತಿ

'ಶಾಲಾಭಿವೃದ್ಧಿ ಸಮಿತಿ'ಗಳೆಂಬುವು ಸಾಮಾನ್ಯವಾಗಿ ಕೇವಲ ನಾಮಕೇವಾಸ್ತೆ ಸಮಿತಿಗಳಾಗಿದ್ದು, ಶಾಲೆಯ ಆಗುಹೋಗುಗಳಲ್ಲಿ ಯಾವುದೇ ಹಿಡಿತ ಇಡಲು ಸಾಧ್ಯವಿಲ್ಲದಿರುವುದು ಮತ್ತು ಶಿಕ್ಷಣದ ವಿಷಯದಲ್ಲಿ ತಾಂತ್ರಿಕ ತಿಳುವಳಿಕೆಯಿಲ್ಲದವರು ಅವುಗಳ ಸದಸ್ಯರಾಗಿರುವುದು ಈ ಸಮಿತಿಗಳಿಗೆ ಶಾಲೆಗಳ ಬಗ್ಗೆ ಹೆಚ್ಚಿನ ಜವಾಬ್ದಾರಿ ಇಲ್ಲದಿರಲು ಕಾರಣವಾಗಿರುತ್ತವೆ.

ಆದರೆ ತೊರೆಹಡ್ಲಿನ ಶಾಲಾಭಿವೃದ್ಧಿ ಸಮಿತಿ ಬಹಳ ಸಕ್ರಿಯವಾಗಿದ್ದು, ಸದಸ್ಯರು ತಮ್ಮ ಸ್ವಂತ ಕೆಲಸಗಳಿಗಿಂತಲೂ ಶಾಲೆಯ ಕೆಲಸಗಳಿಗೆ ಹೆಚ್ಚಿನ ಆಸ್ಥೆ, ಶ್ರಮ ವಹಿಸುವವರಾಗಿದ್ದಾರೆ. ಆದ್ದರಿಂದ, ಅಧ್ಯಾಪಕರಿಲ್ಲದಿದ್ದರೂ ಪಾರ್ಟ್ ಟೈಂ ಆಗಿ ಅವರು-ಇವರು ಅಂತ ಕೆಲವರನ್ನು ಒಟ್ಟುಹಾಕಿ, ಶಾಲೆ ನಡೆಯುತ್ತಿದೆ. (ಶೃಂಗೇರಿ ಶಾಲೆ ಈ ವಿಷಯದಲ್ಲಿ ಇಷ್ಟು ಅದೃಷ್ಟವಂತವಾಗಿಲ್ಲ.)

ಪೋಷಕರ ಮಾರ್ಗದರ್ಶನದ ಕೊರತೆ

ಆದರೆ ವಿದ್ಯಾರ್ಥಿಗಳ ಬೆಳವಣಿಗೆಗೆ ಅಡ್ಡಿಯಾಗುವ ಒಂದು ದೊಡ್ಡ ಸಮಸ್ಯೆಯೆಂದರೆ, ಸಾಮಾನ್ಯವಾಗಿ ಈ ಶಾಲೆಗಳ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಹಳ್ಳಿಗಳಿಂದಲೇ ಬರುವ ರೈತರ ಮಕ್ಕಳಾದ್ದರಿಂದ ಅವರ ಪೋಷಕರಿಗೆ ವಿದ್ಯೆ ಗೊತ್ತಿದ್ದರೂ ಮಕ್ಕಳನ್ನು ವಿಚಾರಿಸುವಷ್ಟು, ಅವರಿಗೆ ಮಾರ್ಗದರ್ಶನ ಮಾಡುವಷ್ಟು ಪುರುಸೊತ್ತು ಮತ್ತು ತಿಳುವಳಿಕೆಯ ಕೊರತೆಯಿರುವುದು.

ಜೊತೆಗೆ ಮಕ್ಕಳು ದೂರದೂರದ ಹಳ್ಳಿಗಳಿಂದ ಬರುವವರಾಗಿದ್ದು ಅವರಿಗೆ ಓದಿಕೊಳ್ಳಲು ಸಮಯವೇ ಸಾಕಾಗುತ್ತಿಲ್ಲ. ಹೀಗಾಗಿ, ಮನೆಗೆ ಕೊಟ್ಟ ಅಭ್ಯಾಸಗಳನ್ನು (ಹೋಂ ವರ್ಕ್) ಸಾಮಾನ್ಯವಾಗಿ ಪೇಟೆಯವರು ಮಾಡಿಕೊಂಡು ಬಂದರೆ, ಹಳ್ಳಿಯ ಎಷ್ಟೋ ಮಕ್ಕಳು ಇದರಲ್ಲಿ ಅಸಮರ್ಥರಾಗಿರುತ್ತಾರೆ.

ಇದಲ್ಲದೆ, ಈ ಎರಡೂ ಶಾಲೆಗಳಲ್ಲಿ ಹೆಚ್ಚಾಗಿ ಇಂಗ್ಲೀಷ್ ಮತ್ತು ಗಣಿತದಲ್ಲೇ ಅನುತ್ತೀರ್ಣರಾಗಿರುವುದು ನೋಡಿದರೆ ಇದಕ್ಕೆ ಕಾರಣ ಈ ವಿಷಯಗಳು ಕಷ್ಟವೆಂದು ಮೊದಲಿನಿಂದಲೂ ತಿಳಿದುಕೊಂಡಿದ್ದರ ಮಾನಸಿಕ ಒತ್ತಡವೋ ಅಥವಾ ಪರಿಣತ ಅಧ್ಯಾಪಕರುಗಳ ಕೊರತೆಯೋ ಹೇಳುವುದು ಕಷ್ಟ.

ತುರ್ತು ಅಗತ್ಯ

ಇಂಥ ಪರಿಸ್ಥಿತಿಯಲ್ಲಿ, ಈ ಎರಡು ಶಾಲೆಗಳಿಗೂ (ಮತ್ತು ಇಂಥ ಎಲ್ಲ ಹಳ್ಳಿಗಾಡಿನ ಶಾಲೆಗಳಿಗೂ) ಮೊಟ್ಟ ಮೊದಲಿಗೆ ಸಾಕಷ್ಟು ಅಧ್ಯಾಪಕರ ನೇಮಕ ಮತ್ತು ಪ್ರಯೋಗ ಶಾಲೆಯ ಸಲಕರಣೆಗಳನ್ನು ಒದಗಿಸುವುದು ತುರ್ತಾಗಿ ಆಗಬೇಕಾಗಿದೆ.

ಶೃಂಗೇರಿ ಶಾಲೆಗೆ ಪರಿಣತ ಆರ್ಟ್ಸ್ ಮತ್ತು ಇಂಗ್ಲೀಷ್ ಅಧ್ಯಾಪಕರ ತುರ್ತು ಅವಶ್ಯಕತೆಯಿದೆ. ತೊರೆಹಡ್ಲು ಶಾಲೆಗೆ ಖಾಲಿ ಮುಖ್ಯೋಪಾಧ್ಯಾಯರ ಮತ್ತು ಪರಿಣತ ಅಧ್ಯಾಪಕರ ಹುದ್ದೆ ಕೂಡಲೇ ಭರ್ತಿಮಾಡುವುದಲ್ಲದೆ, ಇನ್ನು ಕೆಲವೇ ತಿಂಗಳು ಉಳಿದಿರುವ ಗುತ್ತಿಗೆಯ ಮೇಲಿರುವ ಅಧ್ಯಾಪಕರ ಬದಲಿಗೂ ಕೂಡಲೇ ವ್ಯವಸ್ಥೆಯಾಗಬೇಕಾಗಿದೆ.

ಎರಡೂ ಶಾಲೆಗಳಲ್ಲಿ ಪೀಠೋಪಕರಣಗಳ ಕೊರತೆ ತೀವ್ರವಾಗಿದ್ದು, ತಕ್ಷಣ ಪೀಠೋಪಕರಣಗಳ ಸರಬರಾಜು ಆಗಬೇಕು. ಈಗ ಪರೀಕ್ಷೆ ನಡೆಯುವಾಗ ಮಕ್ಕಳನ್ನು ನೆಲ ಮೇಲೆ ಕೂರಿಸಬೇಕಾಗಿದೆಯಂತೆ.

ಭಾವಿ ಕೃಷಿಕ ಸಂಘಗಳ ಉದ್ಘಾಟನೆ

ಕಿಗ್ಗ

ಇಲ್ಲಿಯ ಅಭಿನವ ರಾಮಾನಂದ ಪ್ರೌಢಶಾಲೆಯಲ್ಲಿ ಸಿಂಡಿಕೇಟ್ ಬ್ಯಾಂಕ್ ಮರ್ಕಲ್ ಶಾಖೆಯಿಂದ ಪೋಷಿತವಾದ ವಿದ್ಯಾರ್ಥಿಗಳ ಭಾವೀ ಕೃಷಿಕ ಸಂಘದ 1985-86 ನೇ ಸಾಲಿನ ಕಾರ್ಯಕ್ರಮಗಳ ಉದ್ಘಾಟನೆಯನ್ನು ತಹಸೀಲ್ದಾರರಾದ ಎಸ್. ಎ. ಪ್ರಭಾಕರ ಶರ್ಮ ಜು. 30 ರಂದು ನೆರವೇರಿಸಿದರು. ಹೆಚ್. ಎಸ್. ವೇದವ್ಯಾಸ ಆಚಾರ್ ಸ್ವಾಗತಿಸಿದರು. ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಡಿ. ನಾಗಪ್ಪ ಸಂಘದ ಕಿರು ಪರಿಚಯ ಮಾಡಿದರು. ಮೂಡಿಗೆರೆಯ ಕೃಷಿ ಸಂಶೋಧನಾ ಕೇಂದ್ರದ ವಿಸ್ತರಣಾ ಮಾರ್ಗದರ್ಶಿ ಸಿ.ಕೆ. ಬಾಲಚಂದ್ರ ತರಕಾರಿ ಬೆಳೆಯ ವಿಚಾರದಲ್ಲಿ ಉಪನ್ಯಾಸವಿತ್ತರು. ಸಂಘದ ಸದಸ್ಯರಿಗೆ ಸಿಂಡಿಕೇಟ್ ಕೃಷಿ ಪ್ರತಿಷ್ಠಾನದಿಂದ ಒದಗಿಸಿದ ತರಕಾರಿ ಬೀಜಗಳನ್ನು ಹಂಚಲಾಯಿತು. ಶಿವಕುಮಾರ್‌ರಿಂದ ವಂದನಾರ್ಪಣೆಯಾದ ನಂತರ ಶಾಲೆಯಲ್ಲಿ ತರಕಾರಿ ತೋಟ ಬೆಳೆಸುವ ಪೂರ್ವಭಾವಿಯಾಗಿ ತಜ್ಞರ ಮಾರ್ಗದರ್ಶನದಲ್ಲಿ ತರಕಾರಿ ಬೀಜಗಳನ್ನು ಬಿತ್ತಲಾಯಿತು.

ಹರಿಹರಪುರ

ಇಲ್ಲಿನ ಅಭಿನವ ರಾಮಾನಂದ ಸರಸ್ವತಿ ಕಿರಿಯ ಕಾಲೇಜಿನ ಭಾವೀ ಕೃಷಿಕ ಸಂಘದಲ್ಲಿ ತರಕಾರಿ ಬೀಜ ವಿತರಣೆ ಮತ್ತು ನುರಿತ ರೈತರ ಉಪನ್ಯಾಸ ಕಾರ್ಯಕ್ರಮಗಳು ಜು. 30 ರಂದು ಪ್ರಿನ್ಸಿಪಾಲ್ ಬಿ. ವಿ. ಸತ್ಯನಾರಾಯಣರ ಅಧ್ಯಕ್ಷತೆಯಲ್ಲಿ ನಡೆದವು. ಉಪಾಧ್ಯಾಯರಾದ ಛಾಯಾಪತಿ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿದ್ದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾದ ಪಿ. ಬಾಲಪ್ಪನವರು ಸದಸ್ಯರಿಗೆ ಉಚಿತವಾಗಿ ತರಕಾರಿ ಬೀಜಗಳನ್ನು ಹಂಚಿದರು.

ಪ್ರಗತಿಪರ ರೈತರಾದ ಕೆ.ವಿ. ಶಿವಸ್ವಾಮಿ ಕೃಷಿಯಲ್ಲಿ ಸುಧಾರಿತ ಕ್ರಮಗಳ ಬಗ್ಗೆ ಮಾಹಿತಿ ನೀಡಿ, ಕೃಷಿಯನ್ನು ಒಂದು ವ್ಯಾವಹಾರಿಕ ಮಟ್ಟದಲ್ಲಿ ನಡೆಸಿಕೊಂಡು ಹೋಗುವ ಅಗತ್ಯವನ್ನು ಒತ್ತಿ ಹೇಳಿದರು.

ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜರ್ ಬಿ. ಆರ್. ಪೂಜಾರಿಯವರು ಕೃಷಿಗೆ ರಾಷ್ಟ್ರೀಕೃತ ಬ್ಯಾಂಕು ಹೆಚ್ಚಿನ ಆದ್ಯತೆ ನೀಡುತ್ತಿರುವ ಬಗ್ಗೆ ತಿಳಿಸಿದರು.

ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಎಂ.ಆರ್.ವಿ. ರೆಡ್ಡಿ ಸಂಘದ ಧ್ಯೇಯ ಧೋರಣೆಗಳ ಬಗ್ಗೆ ಮತ್ತು ಸಿಂಡಿಕೇಟ್ ಕೃಷಿ ಪ್ರತಿಷ್ಠಾನದ ಆರ್ಥಿಕ ಸಹಾಯದ ಬಗ್ಗೆ ಮಾಹಿತಿ ನೀಡಿ ವಂದನಾರ್ಪಣೆ ಮಾಡಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.